ಮೂಲ ದಾವಾ ನಂಃ 107/2014

ಡಿ ಡಬ್ಲುಃ 01

ಸಾಕ್ಷಿಯನ್ನು ದಿನಾಂಕಃ **09-01-2025** ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃಶ್ರೀ ಕೆ.ಎಸ್.ಬಿ. ವಕೀಲರಿಂದಃ**

1 ನೇ ಪ್ರತಿವಾದಿಗೆ 4 ಜನ ಹೆಣ್ಣು ಮಕ್ಕಳು ಇರುತ್ತಾರೆ, ಅವರೆಲ್ಲರೂ ದಾವೆಯಲ್ಲಿ 2 ರಿಂದ 4 ನೇ ಪ್ರತಿವಾದಿ ಹಾಗೂ ವಾದಿಯಾಗಿರುತ್ತಾರೆ. ವಾದಿಯ ಮದುವೆಯಾಗಿ ಅಂದಾಜು 12 ವರ್ಷ ಆಗಿರಬಹುದು. ಆದರೆ, ದಾವೆ ಮಾಡುವಾಗ ಅವರ ಮದುವೆ ಆಗಿತ್ತೋ ಇಲ್ಲವೋ ಎಂಬ ಬಗ್ಗೆ ನನಗೆ ನಿಖರವಾಗಿ ಗೊತ್ತಿಲ್ಲ. 2 ನೇ ಪ್ರತಿವಾದಿಯ ಮದುವೆ ಯಾವಾಗ ಆಗಿದೆ ಎಂಬ ಬಗ್ಗೆ ನನಗೆ ನೆನಪಿಲ್ಲ. ಆದರೆ, ಅಂದಾಜು 25 ವರ್ಷ ಆಗಿರಬಹುದು ಎಂದು ಸಾಕ್ಷಿ ನುಡಿದಿರುತ್ತಾರೆ. ವಾದಿ ಮತ್ತು 2 ನೇ ಪ್ರತಿವಾದಿಯ ಮದುವೆಯ ಅಂತರ ಅಂದಾಜು 4-5 ವರ್ಷ ಆಗಿರಬಹುದು.

ವಾದಿ, 2 ಮತ್ತು 3 ನೇ ಪ್ರತಿವಾದಿಯವರು ಯಾವುದೇ ಉದ್ಯೋಗಕ್ಕೆ ಸೇರಿಕೊಂಡಿದ್ದು ಇರುವುದಿಲ್ಲ. ಆದರೆ, 4 ನೇ ಪ್ರತಿವಾದಿಯು ಬೆಂಗಳೂರಿನಲ್ಲಿ ಉದ್ಯೋಗಕ್ಕೆ ಸೇರಿಕೊಂಡಿದ್ದಾಳೆ. ಆದರೆ, ಅವಳು ಯಾವ ಸಾಲಿನಲ್ಲಿ ಉದ್ಯೋಗಕ್ಕೆ ಸೇರಿಕೊಂಡಿದ್ದಾಳೆ ಎಂಬ ಬಗ್ಗೆ ನನಗೆ ನೆನಪಿಲ್ಲ. ವಾದಿ, 2 ಮತ್ತು 3 ನೇ ಪ್ರತಿವಾದಿಯವರು ಎಸ್.ಎಸ್.ಎಲ್.ಸಿ.ವರೆಗೆ ವಿದ್ಯಾಭ್ಯಾಸ ಮಾಡಿರುತ್ತಾರೆ.

ನಾನು 2005 ನೇ ಸಾಲಿನಲ್ಲಿ 1 ನೇ ಪ್ರತಿವಾದಿಯಿಂದ ದಾವಾ ಸ್ಥಳವನ್ನು ಖರೀದಿ ಮಾಡಿದ್ದೇನೆ. ಆಗ ದಾವಾ ಸ್ಥಳವು ಸ.ನಂಃ 29 ಅ ಆಗಿತ್ತು. ದಾವಾ ಸ್ಥಳದ ಖರೀದಿಯ ಪ್ರತಿಫಲ ರೂ.90,000/- ಆಗಿತ್ತು. 1 ನೇ ಪ್ರತಿವಾದಿಯು 2005 ನೇ ಸಾಲಿನಲ್ಲಿ ಆರೋಗ್ಯವಾಗಿ ಇದ್ದರು, ಅವರಿಗೆ ಯಾವುದೇ ಖಾಯಿಲೆ ಇರಲಿಲ್ಲ. ಆ ಸಂದರ್ಭದಲ್ಲಿ ಸೊಸೈಟಿ ಹಾಗೂ ಅಳ್ಳಂಕಿಯ ಬ್ಯಾಂಕ್‌ನಲ್ಲಿ 1 ನೇ ಪ್ರತಿವಾದಿಯ ಸಾಲವಿತ್ತು. ನಾನು ಸದ್ರಿ 1 ನೇ ಪ್ರತಿವಾದಿಯ ಸಾಲದ ಕುರಿತಾಗಿ ನ್ಯಾಯಾಲಯದ ಮುಂದೆ ದಾಖಲೆಯನ್ನು ಹಾಜರುಪಡಿಸಿದ್ದೇನೆ. ನಾನು ಪ್ರತಿಫಲದ ಹಣವನ್ನು ನಗದು ರೂಪದಲ್ಲಿ 1 ನೇ ಪ್ರತಿವಾದಿಗೆ ನೀಡಿದ್ದೇನೆ.

(ನಾನು ಆ ಸಂದರ್ಭದಲ್ಲಿ 1 ನೇ ಪ್ರತಿವಾದಿಯ ಸಾಲದ ಖಾತೆಗೆ ಹಣವನ್ನು ಹಾಕಿದ್ದು ಇರುವುದಿಲ್ಲ. ಈ ಹಂತದಲ್ಲಿ 5 ನೇ ಪ್ರತಿವಾದಿ ಪರ ವಕೀಲರು ಸದರಿ ಪ್ರಶ್ನೆಗೆ ತಕರಾರನ್ನು ಮಾಡಿರುತ್ತಾರೆ.)

ಸದ್ರಿ ಕ್ರಯ ದಸ್ತಾವೇಜಿನಲ್ಲಿ 1 ನೇ ಪ್ರತಿವಾದಿಗೆ 2005 ನೇ ಸಾಲಿನಲ್ಲಿ ಹಣದ ಅಡಚಣೆ ಇದ್ದ ಬಗ್ಗೆ ನಮೂದಿಸಲಾಗಿದೆ. ಸೊಸೈಟಿ ಹಾಗೂ ಬ್ಯಾಂಕ್‌ನಲ್ಲಿರುವ ಸಾಲವನ್ನು 1 ನೇ ಪ್ರತಿವಾದಿ ತುಂಬಿರುವ ಬಗ್ಗೆ ನಾನು ಚೌಕಾಸಿ ಮಾಡಿದ್ದು ಇರುವುದಿಲ್ಲ. 1 ನೇ ಪ್ರತಿವಾದಿಗೆ 2005 ನೇ ಸಾಲಿನಲ್ಲಿ ಆರ್ಥಿಕ ಅಡಚಣೆ ಇರಲಿಲ್ಲ ಎಂದಾಗ ಸಾಕ್ಷಿಯು ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂಬುದಾಗಿ ನುಡಿದಿದ್ದಾರೆ. 2005 ನೇ ಸಾಲಿನಲ್ಲಿ 1 ನೇ ಪ್ರತಿವಾದಿಗೆ ಯಾವುದೇ ಸಾಲ ಇರಲಿಲ್ಲ ಎಂದರೆ ಸರಿಯಲ್ಲ.

ಕ್ರಯ ದಸ್ತಾವೇಜಿನ ಮೇಲೆ 1 ನೇ ಪ್ರತಿವಾದಿ ಹಾಗೂ ಕೃಷ್ಣಪ್ಪ ಜಟ್ಟಿನಾಯ್ಕ ರವರ ಸಹಿಯನ್ನು ಮಾತ್ರ ನಂಬಿಕೆಯ ಆಧಾರದ ಮೇಲೆ ಪಡೆಯಲಾಗಿದೆ. ನಾನು ನನಗೆ ಗೊತ್ತಿರುವ ದಾಖಲೆಗಳನ್ನು ನಮ್ಮ ವಕೀಲರ ಮೂಲಕ ನ್ಯಾಯಾಲಯದ ಮುಂದೆ ಹಾಜರುಪಡಿಸಿದ್ದೇನೆ. 1 ನೇ ಪ್ರತಿವಾದಿಯು ಇನ್ನೊಬ್ಬ ವ್ಯಕ್ತಿಗೆ ಕ್ರಯ ಪತ್ರವನ್ನು

ಮಾಡಿಕೊಟ್ಟಿದ್ದರು ಎಂದರೆ ಸರಿಯಲ್ಲ. ಸದ್ರಿ ಕ್ರಯ ದಸ್ತಾವೇಜನ್ನು ನಾನು ಪರಿಶೀಲಿಸಿ ನೋಡಿದ್ದು ಇರುವುದಿಲ್ಲ. ನಾನು ಖರೀದಿ ಮಾಡಿರುವ ದಾವಾ ಸ್ಥಳದ ಕ್ರಯ ಪತ್ರವು ವಾದಿಯ ಹಕ್ಕಿಗೆ ಬಂಧನಕಾರಿಯಲ್ಲ

ಎಂದರೆ ಸರಿಯಲ್ಲ. ನಾನು ಸದರಿ ಕ್ರಯವು ವಾದಿಯ ಹಕ್ಕಿನ ಬಂಧನಕಾರಿಯಾಗುತ್ತದೆ ಎಂಬುದಾಗಿ ನ್ಯಾಯಾಲಯದ ಮುಂದೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

2005 ನೇ ಸಾಲಿನಲ್ಲಿ ಕ್ರಯ ದಸ್ತಾವೇಜಿನ ಮೇಲೆ ಹೆಣ್ಣು ಮಕ್ಕಳ ಸಹಿಯನ್ನು ಪಡೆಯಲು ತೊಂದರೆ ಇತ್ತಾ ಎಂದು ಕೇಳಿದಾಗ, ಸಾಕ್ಷಿಯು 1 ನೇ ಪ್ರತಿವಾದಿಯು ಅವರೆಲ್ಲಾ ಬೇರೆ ಬೇರೆ ಸ್ಥಳಗಳಲ್ಲಿ ವಾಸವಿದ್ದಾರೆ, ಆದ್ದರಿಂದ ನನ್ನ ಮತ್ತು ನನ್ನ ತಮ್ಮನ ಸಹಿ ಸಾಕು ಎಂಬುದಾಗಿ ನನ್ನ ಮುಂದೆ ಹೇಳಿದ್ದರು ಎಂಬುದಾಗಿ ನುಡಿದಿದ್ದಾರೆ.

ಮರು ವಿಚಾರಣೆ ಇಲ್ಲ .

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

Sd/-

C/c. ಪ್ರಧಾನ ಪ್ರ ದ ನ್ಯಾದಂ ,ಹೊನ್ನಾವರ.